**ದಿನಾಂಕಃ 22-09-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ದೂರುದಾರರ ಪರ ಶ್ರೀ ಪಿ ವಿ ಕೆ ವಕೀಲರಿಂದಃ**

5. ನನ್ನ ಚೆಕ್ಕುಗಳು 2016 ರಲ್ಲಿ ಕಳ್ಳತನವಾಗಿವೆ ಆದರೆ ದಿನಾಂಕ ಗೊತ್ತಿಲ್ಲ. ನನ್ನ ಚೆಕ್ಕುಗಳು ಮನೆಯಿಂದ ಕಳ್ಳತನವಾಗಿದ್ದರಿಂದ ಯಾರ ವಿರುದ್ಧ ದೂರು ಕೊಡಬೇಕು ಎಂದು ಗೊತ್ತಾಗಲಿಲ್ಲ ಆದ್ದರಿಂದ ದೂರು ನೀಡಿಲ್ಲ. ನನ್ನ ಚೆಕ್ಕುಗಳು ಕಳ್ಳತನವಾಗಿದ್ದು, ಸದರಿ ಚೆಕ್ಕುಗಳ ಕುರಿತು ಪೇಮೆಂಟ್ ಸ್ಟಾಪ್ ಮಾಡಬೇಕು ಎಂದು ಹೇಳಿ ನಾನು ಬ್ಯಾಂಕ್ ಗೆ ಮಾಹಿತಿ ನೀಡಿಲ್ಲ. ಚೆಕ್ ಕಳ್ಳತನವಾದ ಕುರಿತು ಉತ್ತರದ ನೋಟಿಸಿನಲ್ಲಿ ನಾನು ಬರೆಯಿಸಿಲ್ಲ ಸಾಕ್ಷಿಯು ಮುಂದುವರೆದು ಆ ಕುರಿತು ವಕೀಲರಿಗೆ ಹೇಳಲು ನೆನಪಾಗಲಿಲ್ಲ ಎಂದು ನುಡಿಯುತ್ತಾರೆ. ಹಣ ನೀಡುವುದನ್ನು ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ .

6. ಈ ಪ್ರಕರಣದಲ್ಲಿ ಹಾಜರು ಪಡಿಸಿರುವ ಚೆಕ್ ಮೇಲಿರುವ ಸಹಿ ನನ್ನದು ಎಂದರೆ ನಿಜ. ಈಗ ನಾನು ಸದರಿ ಚೆಕ್ ನ್ನು ನೋಡುತ್ತಿದ್ದು, ಅದರ ಮೇಲೆ ನನ್ನ ಸಹಿ ಇದೆ. ನಿಪಿ-3 ಎಂದು ಗುರುತಿಸಲಾಗಿರುವ ಕೈಗಡ ಸಾಲ ಪತ್ರವನ್ನು ನಾನು ಈಗ ನೋಡುತ್ತಿದ್ದು, ಅದರಲ್ಲಿರುವ ಸಹಿ ನನ್ನದು ಎಂದರೆ ನಿಜ. ನಾನು ದೂರುದಾರನಿಗೆ ಹಣ ನೀಡಬೇಕಾಗಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ.

7. ನನ್ನ ವಿರುದ್ಧ ಇದ್ದ 3 ಚೆಕ್ ಬೌನ್ಸ ಕೇಸಗಳನ್ನು ಯಾವ ಕಾರಣ ನಮೂದಿಸಿ ಹಿಂದೆ ಪಡೆಯಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ನಾನು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.